**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕ: **03.06.2026**

**ಪಾಟೀ ಸವಾಲು:-** ಶ್ರೀ ಟಿ.ಎಸ್.ಪಿ ವಾದಿಯರ ಪರ ವಕೀಲರಿಂದ

3ನೇ ಪ್ರತಿವಾದಿ ಚಂದ್ರಮ್ಮ ನನ್ನ ಹೆಂಡತಿ, ಅವರಿಗೆ ಆರೋಗ್ಯ ಸರಿಯಿರುವುದಿಲ್ಲ. ಅವರು ಚೆನ್ನಾಗಿದ್ದರು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ. 1 ರಲ್ಲಿ ಸ.ನಂ 20/1 ರಲ್ಲಿ 37 ಗುಂಟೆಯನ್ನು ಲಕ್ಷ್ಮಮ್ಮರವರಿಂದ ನನ್ನ ಹೆಂಡತಿ 3ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ. ಸದರಿ ಲಕ್ಷ್ಮಮ್ಮರವರಿಗೆ ರಂಗೇಗೌಡರವರ ಮಗ ನಂಜೇಗೌಡರವರಿಂದ ರಂಗಯ್ಯ ರವರು ಖರೀದಿ ಮಾಡಿದ್ದು, ರಂಗಯ್ಯರವರಿಂದ ಅಬ್ದುಲ್ ಸುಬಾನ್ ರವರು ಖರೀದಿ ಮಾಡಿದ್ದು, ಅವರಿಂದ ಲಕ್ಷ್ಮಮ್ಮರವರು ಖರೀದಿ ಮಾಡಿರುತ್ತಾರೆ, ನಂತರ ಇವರಿಂದ ನನ್ನ ಹೆಂಡತಿ 3ನೇ ಪ್ರತಿವಾದಿಯು ಖರೀದಿ ಮಾಡಿರುತ್ತಾರೆ. ಸದರಿ ರಂಗಯ್ಯ ರವರು ಲಕ್ಷ್ಮಮ್ಮರವರ ಮಾವ ಎಂದರೆ ಸರಿ. ಸದರಿ ರಂಗಯ್ಯ ರವರು ಸದರಿ ಸ.ನಂ ನಲ್ಲಿ 2 ಎಕರೆ ಖರೀದಿ ಮಾಡಿರಬಹುದು ಅದರಲ್ಲಿ ಚಾನೆಲ್ ಗೆ ಹೋಗಿರುತ್ತದೆ. ಚಾನೆಲ್ ಗೆ ಹೋಗಿರುವ ಬಗ್ಗೆ ಯಾವುದೇ ದಾಖಲಾತಿ ನೀಡಿರುವುದಿಲ್ಲ.

ಅಬ್ದುಲ್ ಸುಬಾನ್ ರವರು ಪುನಃ ನಮಗೆ ಬರೆದುಕೊಡಬೇಕು ಎಂಬ ಷರತ್ತಿನೊಂದಿಗೆ ಕ್ರಯ ಮಾಡಿಕೊಟ್ಟಿದ್ದರು ಎಂದರೆ ಆ ರೀತಿ ಬರೆದುಕೊಟ್ಟಿಲ್ಲ ಕ್ರಯ ಆಗಿರುತ್ತದೆ ಎಂದು ನುಡಿಯುತ್ತಾರೆ. ರಂಗಯ್ಯರವರು ಬರೆಸಿಕೊಡುವ ಬದಲು ಲಕ್ಷ್ಮಮ್ಮರವರಿಗೆ ಬರೆದಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆದ ಕಾರಣ ಲಕ್ಷ್ಮಮ್ಮರವರಿಗೆ ಕಾನೂನು ಬದ್ದವಾಗಿ ಮಾರಾಟ ಮಾಡಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ 3ನೇ ಐಟಂ ಸ.ನಂ 188 ರಲ್ಲಿ 20 ಗುಂಟೆಯನ್ನು ಪುಟ್ಟರಾಜು ರವರಿಂದ ನನ್ನ ಹೆಂಡತಿ ಖರೀದಿ ಮಾಡಿರುತ್ತಾರೆ. ಸದರಿ ಪುಟ್ಟರಾಜು ರವರು ರಂಗಯ್ಯರವರಿಂದ 20 ಗುಂಟೆಯನ್ನು ಖರಿದಿ ಮಾಡಿದ್ದರು. ಸದರಿ ಸ.ನಂ ನಲ್ಲಿ ರಂಗಯ್ಯರವರಿಗೆ ಇನ್ನು ಎಷ್ಟು ಉಳಿದಿದೆ ಎಂದು ನನಗೆ ಗೊತ್ತಿಲ್ಲ. ಸದರಿ 20 ಗುಂಟೆಯನ್ನು ಹೊರತು ಪಡಿಸಿ ಬೇರೆ ಉಳಿಕೆ ಸ್ವತ್ತಿನ ಬಗ್ಗೆ ಏನು ನಡುವಳಿಕೆ ಆಗಿದೆ ಎಂದು ನನಗೆ ಗೊತ್ತಿಲ್ಲ.

1ನೇ ವಾದಿಗೆ ಸ್ವಾಮಿ ಎಂಬ ಮಗ ಇದ್ದ ಎಂದು ಹೇಳಿದ್ದು ಅವರ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯವರಿಗೆ ಹಿಸ್ಸಾ ಹಕ್ಕು ಇರುವ ಸ್ವತ್ತುಗಳನ್ನು ನಾವು ಖರಿದಿ ಮಾಡಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ